**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ದಾವಣಗೆರೆ.</u>**

**<u>ಎಸ್.ಸಿ. ಸಂಖ್ಯೆಃ 112/2020</u>**

**<u>ಫಿರ್ಯಾದುದಾರರುಃ</u>** ಕರ್ನಾಟಕ ಸರ್ಕಾರದ ಪರವಾಗಿ ಆರಕ್ಷಕ ಉಪನಿರೀಕ್ಷಕರು, ನ್ಯಾಮತಿ ಪೋಲೀಸ್ ಠಾಣೆ,

**-ವಿರುದ್ಧ-**

**<u>ಆರೋಪಿತರುಃ-</u>** ಬಸವರಾಜ ಎ.ಕೆ. ತಂದೆ ಲೇಟ್ ದುರುಗಪ್ಪ ಮತ್ತು ಇತರರು.

. . . . .

**<u>-ದೋಷಾರೋಪಣೆ-</u>**

ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ, ಬಿ.ಕಾಂ., ಎಲ್ಎಲ್.ಬಿ.,(ಸ್ಪೆಷಲ್), ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ ಆದ ನಾನು, ಈ ಕೆಳಕಂಡ ಆರೋಪಿತರಾದ,

1. ಬಸವರಾಜಪ್ಪ ಎ.ಕೆ ತಂದೆ ಲೇಟ್ ದುರುಗಪ್ಪ, ವಯಸ್ಸುಃ 51 ವರ್ಷ, ಉದ್ಯೋಗಃ ವ್ಯವಸಾಯ, ವಾಸಃ ನಲ್ಲಿನಕೊಪ್ಪ ಗ್ರಾಮ, ಶಿಕಾರಿಪೂರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

2. ಶ್ರೀಧರ್ ತಂದೆ ಬಸವರಾಜಪ್ಪ ಎ.ಕೆ, ವಯಸ್ಸುಃ 27 ವರ್ಷ, ಉದ್ಯೋಗಃ ವ್ಯವಸಾಯ, ವಾಸಃ ನಲ್ಲಿನಕೊಪ್ಪ ಗ್ರಾಮ, ಶಿಕಾರಿಪೂರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

3. ಮಹೇಶ್ವರಪ್ಪ ಎ.ಕೆ ತಂದೆ ಲೇಟ್ ದುರುಗಪ್ಪ, ವಯಸ್ಸುಃ 65 ವರ್ಷ, ಉದ್ಯೋಗಃ ವ್ಯವಸಾಯ, ವಾಸಃ ನಲ್ಲಿನಕೊಪ್ಪ ಗ್ರಾಮ, ಶಿಕಾರಿಪೂರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

4. ರಾಜು ತಂದೆ ಮಹೇಶ್ವರಪ್ಪ ಎ.ಕೆ, ವಯಸ್ಸುಃ 35 ವರ್ಷ, ಉದ್ಯೋಗಃ ಕೂಲಿ ಕೆಲಸ, ವಾಸಃ ನಲ್ಲಿನಕೊಪ್ಪ ಗ್ರಾಮ, ಶಿಕಾರಿಪೂರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

5. ಅಣ್ಣಪ್ಪ ತಂದೆ ಸದಾಶಿವಪ್ಪ ಎ.ಕೆ, ವಯಸ್ಸುಃ 30 ವರ್ಷ, ಉದ್ಯೋಗಃ ಕೂಲಿ ಕೆಲಸ, ವಾಸಃ ಮಧನಬಾವಿ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಿಸುತ್ತೇನೆಃ-

ಮೊದಲನೇಯದಾಗಿ ದಿನಾಂಕ 03.01.2014 ರಂದು ರಾತ್ರಿ 10.00 ಗಂಟೆಗೆ 1 ರಿಂದ 5 ನೇ ಆರೋಪಿತರಾದ ನೀವು ಪಿರ್ಯಾದಿದಾರರು 5 ನೇ ಆರೋಪಿ ಅಣ್ಣಪ್ಪರವರ ತಂಗಿಯನ್ನು ಪ್ರೀತಿಸಿದ್ದು ಅವಳನ್ನು ಮದುವೆ ಮಾಡಿಕೊಳ್ಳಬೇಕೆಂಬ ತಮ್ಮ ಏಕಸಮಾನ ಉದ್ದೇಶ ಸಾಧನೆಗಾಗಿ ಅಕ್ರಮ ಕೂಟವನ್ನು ರಚಿಸಿಕೊಂಡು ನೀವು ಅದರ ಸದಸ್ಯರಾಗಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 143 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಮೇಲ್ಕಂಡ ಘಟನೆಗೆ ಮುಂದುವರೆದು, 1 ರಿಂದ 5 ನೇ ಆರೋಪಿತರಾದ ನೀವು ಅಕ್ರಮ ಗುಂಪನ್ನು ಕಟ್ಟಿಕೊಂಡು ತಮ್ಮ ಏಕಸಮಾನ ಉದ್ದೇಶ ಸಾಧನೆಯನ್ನು ಈಡೇರಿಸಿಕೊಳ್ಳುವ ಸಲುವಾಗಿ ಪಿರ್ಯಾದಿದಾರರ ತಂದೆ ಮೃತ ಪರಮೇಶ್ವರಪ್ಪರವರ ವಾಸದ ಮನೆಯ ಮುಂದೆ ದೊಂಬಿ ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 147 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಮೇಲ್ಕಂಡ ಘಟನೆಗೆ ಮುಂದುವರೆದು, 1 ರಿಂದ 5 ನೇ ಆರೋಪಿತರಾದ ನೀವು ತಮ್ಮ ಏಕಸಮಾನ ಉದ್ದೇಶ ಸಾಧನೆಗಾಗಿ ಮೃತ ಪರಮೇಶ್ವರಪ್ಪ ರವರ ಮನೆಗೆ ಹೋಗಿ, 1 ನೇ ಆರೋಪಿತನಾದ ನೀನು ಕೈಗಳಿಂದ ಮೃತ ಪರಮೇಶ್ವರಪ್ಪ ರವರ ಕಪಾಳಕ್ಕೆ ಹೊಡೆದು, ಸಾದಾ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 323 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಮೇಲ್ಕಂಡ ಘಟನೆಗೆ ಮುಂದುವರೆದು, 1 ರಿಂದ 5 ನೇ ಆರೋಪಿತರಾದ ನೀವು ತಮ್ಮ ಏಕಸಮಾನ ಉದ್ದೇಶ ಸಾಧನೆಗಾಗಿ ಪಿರ್ಯಾದುದಾರರು 5 ನೇ ಆರೋಪಿತನಾದ ನಿನ್ನ ತಂಗಿಯನ್ನು ಪ್ರೀತಿಸಿದ್ದಾನೆ ಮದುವೆ ಮಾಡಿಕೊಳ್ಳಲೇ ಬೇಕು ಎಂದು ಮೃತ ಪರಮೇಶ್ವರಪ್ಪ ರವರಿಗೆ ಕೈಗಳಿಂದ ಕಪಾಳಕ್ಕೆ ಹೊಡೆದು ಮಾನಸಿಕವಾಗಿ ಹಿಂಸೆಯನ್ನು ನೀಡಿದ್ದು, ನಂತರ ದಿಃ 4-1-2017 ರಂದು ಬೆಳಿಗ್ಗೆ 8-30 ಗಂಟೆಗೆ 1 ನೇ ಆರೋಪಿತನಾದ ನೀನು ಫಿರ್ಯಾದಿದಾರರ ಬಳಿ ಹೋಗಿ ನೀನು ಮದುವೆ ಮಾಡಿಕೊಳ್ಳುವುದು

ಬೇಡ, ರೂ. 2 ಲಕ್ಷವನ್ನು ಕೊಡು ಅಂತಾ ಕೇಳಿದ್ದು, ನಂತರ ಆರೋಪಿತರಾದ ನೀವು ಮೃತ ಪರಮೇಶ್ವರಪ್ಪ ಮತ್ತು ಫಿರ್ಯಾದುದಾರರ ಮನೆಯ ಮುಂದೆ ಬಂದು ನಾಳೆ ಬೆಳಿಗ್ಗೆ ಪೋಲೀಸ್ ಕಂಪ್ಲೆಂಟ್ ಕೊಟ್ಟು ನಿಮ್ಮನ್ನು ಜೈಲಿಗೆ ಕಳುಹಿಸುತ್ತೇವೆ ಅಂತಾ ಹೆದರಿಸಿ, ಮೃತ ಪರಮೇಶ್ವರಪ್ಪ ರವರಿಗೆ ಮಾನಸಿಕ ಹಿಂಸೆಯನ್ನು ನೀಡಿ ಆತ್ಮಹತ್ಯೆ ಮಾಡಿಕೊಳ್ಳಲು ದುಷ್ಪ್ರೇರಣೆ ನೀಡಿದ್ದರಿಂದ, ಮೃತನು ನಮ್ಮ ಮನೆಯ ಮಾನ ಮರ್ಯಾದೆ ಹೋಯಿತಲ್ಲಾ, ಊರ ಜನರ ಮುಂದೆ ನಮಗೆ ಅವಮಾನವಾಯಿತಲ್ಲಾ ಎಂದು ಹಾಗೂ ಆರೋಪಿತರು ನೀಡಿದ ಮಾನಸಿಕ ಹಿಂಸೆಯಿಂದ ಮನನೊಂದು, ಮೃತ ಪರಮೇಶ್ವರಪ್ಪನು ದಿನಾಂಕ 04.01.2017 ರಂದು ರಾತ್ರಿ 08.30 ಗಂಟೆಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಹಾಗೂ ಸದರಿ ಕೃತ್ಯಕ್ಕೆ ಆರೋಪಿತರಾದ ನೀವು ಕಾರಣರಾಗಿರುತ್ತೀರೆಂದು, ಆ ಮೂಲಕ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 306 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮತ್ತು 1 ರಿಂದ 5 ನೇ ಆರೋಪಿತರಾದ ನೀವು ಮೇಲೆ ಹೇಳಿದ ಆರೋಪಗಳ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 1 ನೇ ದಿವಸ ಜೂನ್ ಮಾಹೆಯ 2022 ನೇ ಇಸವಿಯಂದು.

**(ರಾಜೇಶ್ವರಿ ಎನ್. ಹೆಗಡೆ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

**<u>ಆರೋಪಿ ನಂ.1ಃ ಬಸವರಾಜಪ್ಪ ಎ.ಕೆ.</u>**

**<u>ಆರೋಪಿಯ ಆಪಾದನೆ</u>**

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?

ಉತ್ತರ:

ಪ್ರಶ್ನೆ ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?

ಉತ್ತರ:

(ದಿನಾಂಕ 1ನೇ ದಿವಸ ಜೂನ್ ಮಾಹೆಯ 2022 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

***(ರಾಜೇಶ್ವರಿ ಎನ್. ಹೆಗಡೆ )***
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

**<u>ಆರೋಪಿ ನಂ.2ಃ ಶ್ರೀಧರ್</u>**

**<u>ಆರೋಪಿಯ ಆಪಾದನೆ</u>**

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?

ಉತ್ತರ:

ಪ್ರಶ್ನೆ ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?

ಉತ್ತರ:

(ದಿನಾಂಕ 1ನೇ ದಿವಸ ಜೂನ್ ಮಾಹೆಯ 2022 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

***(ರಾಜೇಶ್ವರಿ ಎನ್. ಹೆಗಡೆ )***
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

**<u>ಆರೋಪಿ ನಂ.3 ಮಹೇಶ್ವರಪ್ಪ</u>**

**<u>ಆರೋಪಿಯ ಆಪಾದನೆ</u>**

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?

ಉತ್ತರ:

ಪ್ರಶ್ನೆ ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?

ಉತ್ತರ:

(ದಿನಾಂಕ 1 ನೇ ದಿವಸ ಜೂನ್ ಮಾಹೆಯ 2022 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

***(ರಾಜೇಶ್ವರಿ ಎನ್. ಹೆಗಡೆ)***
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

**<u>ಆರೋಪಿ ನಂ.4 ರಾಜು</u>**

**<u>ಆರೋಪಿಯ ಆಪಾದನೆ</u>**

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?

ಉತ್ತರ:

ಪ್ರಶ್ನೆ ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?

ಉತ್ತರ:

(ದಿನಾಂಕ 1 ನೇ ದಿವಸ ಜೂನ್ ಮಾಹೆಯ 2022 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

***(ರಾಜೇಶ್ವರಿ ಎನ್. ಹೆಗಡೆ)***
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

**<u>ಆರೋಪಿ ನಂ.5 ಅಣ್ಣಪ್ಪ</u>**

**<u>ಆರೋಪಿಯ ಆಪಾದನೆ</u>**

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?

ಉತ್ತರ:

ಪ್ರಶ್ನೆ ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?

ಉತ್ತರ:

(ದಿನಾಂಕ 1 ನೇ ದಿವಸ ಜೂನ್ ಮಾಹೆಯ 2022 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

***(ರಾಜೇಶ್ವರಿ ಎನ್. ಹೆಗಡೆ )***
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.